# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ: ಕೊಪ್ಪ

## ಸಿ.ಸಿ. ನಂ: 238/2021

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು.

:ವಿ:

**ಆರೋಪಿತರು** : 1. ಹೆಚ್.ಎಂ. ಜಗದೀಶ, ಬಿನ್. ಮರಿಯಪ್ಪ ಗೌಡ, 60 ವರ್ಷ, ವ್ಯವಸಾಯ,

2. ಗಾಯನ, ಬಿನ್. ಹೆಚ್.ಎಂ. ಜಗದೀಶ, 22 ವರ್ಷ, ವ್ಯವಸಾಯ,

ಇಬ್ಬರ ವಾಸ: ಹೊರಬೈಲು, ನಿಲುವಾಗಿಲು ಗ್ರಾಮ,
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

- - -

### ದೋಷಾರೋಪಣೆ

ಪ್ರಿಯಾ ರವಿ ಜೋಗಳೇಕರ್, ಬಿ.ಕಾಂ.,ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ; ಕೊಪ್ಪ, ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 26.8.2020ರಂದು ಬೆಳಿಗ್ಗೆ 10.30 ಗಂಟೆಯ ಸಮಯದಲ್ಲಿ ಹರಿಹರಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಿಲುವಾಗಿಲು ಗ್ರಾಮದ ಹೊರಬೈಲು ಸ.ನಂ. 125ರ 1ನೇ ಆರೋಪಿಯಾದ ನಿಮ್ಮ ತೋಟದಲ್ಲಿ ಚಾಸಾ 1 ಸುರೇಂದ್ರರವರು ತೋಟದ ನೀರಿನ ಕಾಲುವೆ ವಿಚಾರವಾಗಿ ಕೇಳಲು ಬಂದಾಗ ನೀವು ಆರೋಪಿ 1 ಮತ್ತು 2ರವರು ಸಮಾನ ಉದ್ದೇಶದಿಂದ ನೀವು 1ನೇ ಆರೋಪಿ ಮಾರಕಾಸ್ತ್ರವಾದ ಗುದ್ದಲಿಯ ಹಿಂಭಾಗದಿಂದ ಚಾಸಾ 1ರವರ ತಲೆಗೆ ಹಾಗೂ ನೀವು 2ನೇ ಆರೋಪಿ ದೊಣ್ಣೆಯಿಂದ ಚಾಸಾ 1ರವರ ಕಾಲಿಗೆ ಮತ್ತು ಬೆನ್ನಿಗೆ ಹೊಡೆದು ಸ್ವಇಚ್ಛೆಯಿಂದ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಭಾ.ದಂ.ಸಂ. ಕಲಂ 324 ಸಹ ಕಲಂ 34ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಆರೋಪಿ 1 ಮತ್ತು 2 ರವರು ಸಮಾನ ಉದ್ದೇಶದಿಂದ, ನೀವು ಆರೋಪಿ 1 ರವರು ಚಾಸಾ 1 ಸುರೇಂದ್ರ ರವರನ್ನು ಅವಾಚ್ಯ ಶಬ್ದಗಳಿಂದ ಅವಮಾನವಾಗುವಂತೆ ನಿಂದಿಸಿ, ಅದರಿಂದ ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವನ್ನುಂಟು ಮಾಡಿ ಭಾ.ದಂ.ಸಂ. ಕಲಂ 504 ಸಹ ಕಲಂ 34ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ**?**

ಉಃ ಆಃ1ಃ ತಿಳಿಯಿತು

ಆಃ2ಃ "

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ**?**

ಉಃ ಆಃ1ಃ ವಿಚಾರಣೆ ಆಗಬೇಕು

ಆಃ2ಃ "

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 8ನೇ ದಿವಸ, ನವೆಂಬರ್ ಮಾಹೆ, 2021.

8/11/21

(ಪ್ರಿಯಾ ರವಿ ಜೋಗಳೇಕರ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ;ಕೊಪ್ಪ.